# ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ನಡವಳಿ

**ವಿಷಯ:-** 2023-24ನೇ ಸಾಲಿನ ಡಿಸೆಂಬರ್-2023 ರಿಂದ ಮಾರ್ಚ್-2024ರ ವರೆಗಿನ ರಾಜ್ಯ ಹಣಕಾಸು ಆಯೋಗದ ಮೂರನೇ ಕಂತಿನ ಅಭಿವೃದ್ಧಿ ಅನುದಾನವನ್ನು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ**:-1. ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ 07 ಟಿ ಎಫ್ ಪಿ 2023, ದಿನಾಂಕ: 31.07.2023.

2. ಆರ್ಥಿಕ ಇಲಾಖೆ ಪತ್ರ ಸಂಖ್ಯೆ: ಆಇ 1 ಟಿ ಎಫ್ ಪಿ 2023, ಬೆಂಗಳೂರು, ದಿನಾಂಕ:31.07.2023.
3. ಸರ್ಕಾರದ ಆದೇಶ ಸಂಖ್ಯೆ:ಆರ್ ಡಿ ಪಿ ಆರ್/4/ಎಎಫ್‌ಎನ್/ 2023, ಬೆಂಗಳೂರು, ದಿನಾಂಕ:01.08.2023.
4. ಕಾರ್ಮಿಕ ಇಲಾಖೆ ಅಧಿಸೂಚನೆ ಸಂಖ್ಯೆ:ಕಾಇ 106 ಎಲ್ ಡಬ್ಲ್ಯೂ ಎ 2021. ದಿನಾಂಕ:28.07.2022.
5. ಸರ್ಕಾರದ ಆದೇಶ ಸಂಖ್ಯೆ: ಆರ್ ಡಿ ಪಿ ಆರ್/234/ಜಿಪಿಎ/2023, ಬೆಂಗಳೂರು, ದಿನಾಂಕ:05.08.2023.

***

**ಪ್ರಸ್ತಾವನೆ:**

2023-24 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2515-00-198-1-07-300ರ ಅಡಿಯಲ್ಲಿ "ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿಅನುದಾನ/ ಗ್ರಾಮ ಪಂಚಾಯಿತಿಗಳಿಗೆ ಸಹಾಯ" ಹೆಸರಿನಲ್ಲಿ ಒಟ್ಟು ₹.1202,18,00,000 (ರೂ.ಒಂದು ಸಾವಿರದ ಎರಡು ನೂರಾ ಎರಡು ಕೋಟಿ ಹದಿನೆಂಟು ಲಕ್ಷ)ಗಳನ್ನು ಒದಗಿಸಿದ್ದು, ಈ ಪೈಕಿ ವಾರ್ಷಿಕವಾಗಿ ₹.652,99,00,000/-(ರೂ. ಆರುನೂರಾ ಐವತ್ತೆರಡು ಕೋಟಿ ತೊಂಬತ್ತೊಂಬತ್ತು ಲಕ್ಷ)ಗಳು ಶಾಸನಬದ್ಧ ಅನುದಾನವಾಗಿದ್ದು, ಇದರ ಶೇ.60ರಷ್ಟು ಅಂದರೆ ₹.391,79,40,000/- (ಮೂರು ನೂರಾ ತೊಂಭತ್ತೊಂದು ಕೋಟಿ ಎಪ್ಪತ್ತೊಂಭತ್ತು ಲಕ್ಷದ ನಲವತ್ತು ಸಾವಿರ ರೂಪಾಯಿ) ಗಳನ್ನು ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ ಮೊತ್ತ ಭರಿಸಲು ಹಾಗೂ ಶೇ.40ರಷ್ಟು ಅಂದರೆ ₹.261,19,60,000/- (ರೂ.ಎರಡು ನೂರಾ ಅರವತ್ತೊಂದು ಕೋಟಿ ಹತ್ತೊಂಭತ್ತು ಲಕ್ಷದ ಅರವತ್ತು ಸಾವಿರ ಮಾತ್ರ) ಗಳನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ವೇತನ ಪಾವತಿ ಮಾಡಲು ಮತ್ತು ಸಿಬ್ಬಂದಿ ವೇತನಕ್ಕೆ ಅನುದಾನ ಕೊರತೆಯಾಗುವುದರಿಂದ ಆಯವ್ಯಯದಲ್ಲಿ ಉಳಿಕೆ (ಸಿಬ್ಬಂದಿ ವೇತನಕ್ಕಾಗಿ ಮೀಸಲಿರಿಸಿದ) ಅನುದಾನ ₹.549,19,00,000/- (ರೂ. ಐದು ನೂರಾ ನಲವತ್ತೊಂಬತ್ತು ಕೋಟಿ ಹತ್ತೊಂಭತ್ತು ಲಕ್ಷ)ಗಳು ಸೇರಿದಂತೆ ಸಿಬ್ಬಂದಿ ವೇತನಕ್ಕಾಗಿ ₹.810,38,60,000/- (ರೂಪಾಯಿ ಎಂಟು ನೂರ ಹತ್ತು ಕೋಟಿ ಮೂವತ್ತೆಂಟು ಲಕ್ಷ ಅರವತ್ತು ಸಾವಿರ) ಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(1)ರ ಆದೇಶದಲ್ಲಿ 2023-24ನೇ ಸಾಲಿಗೆ ಹಂಚಿಕೆಯಾದ ಅನುದಾನದಲ್ಲಿ 2023-24ನೇ ಸಾಲಿನ ಡಿಸೆಂಬರ್-2023 ರಿಂದ ಮಾರ್ಚ್-2024 ವರೆಗೆ ಮೂರನೇ ಕಂತಿನ ಅನುದಾನ ಬಿಡುಗಡೆ ಮಾಡಲು ಇಲಾಖಾ ಮುಖ್ಯಸ್ಥರಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ(3) ರಲ್ಲಿ 2023-24 ನೇ ಸಾಲಿನ ಗ್ರಾಮೀಣಾಭೀವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಸಂಸ್ಥೆ/ಮಂಡಳಿ/ನಿಗಮ/ಕಚೇರಿಗಳಿಗೆ ಸಂಬಂಧಿಸಿದಂತೆ ಅನುದಾನವನ್ನು ರಾಜ್ಯ ಮತ್ತು ಜಿಲ್ಲಾ ವಲಯಗಳಡಿ ನಿಗದಿಪಡಿಸಲಾದ ಲೆಕ್ಕಶೀರ್ಷಿಕೆವಾರು ಕಾರ್ಯಕ್ರಮಗಳನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಮುಂದುವರೆಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4)ರ ಕಾರ್ಮಿಕ ಇಲಾಖೆಯ ಅಧಿಸೂಚನೆಯನ್ವಯ, ಗ್ರಾಮ ಪಂಚಾಯತಿ ಸಿಬ್ಬಂದಿಗಳ ವೇತನ ಪಾವತಿಗಾಗಿ ಪ್ರತಿ ಗ್ರಾಮ ಪಂಚಾಯಿತಿಯ ಬೇಡಿಕೆಯ ಒಟ್ಟಾರೆ ಅನುದಾನದಲ್ಲಿ ಸರಾಸರಿ ಸುಮಾರು ಶೇ.86.48 ರಷ್ಟನ್ನು ಅಂದರೆ ಪ್ರಸ್ತುತ ರಾಜ್ಯದಲ್ಲಿನ ಒಟ್ಟು 5951 ಗ್ರಾಮ ಪಂಚಾಯಿತಿಗಳ ಪೈಕಿ ವಾರ್ಷಿಕವಾಗಿ ₹.50.00 ಲಕ್ಷಕ್ಕಿಂತ ಹೆಚ್ಚಿನ ಸ್ವಂತ ಸಂಪನ್ಮೂಲ ಹೊಂದಿರುವ 174 ಗ್ರಾಮ ಪಂಚಾಯಿತಿಗಳನ್ನು ಹೊರತುಪಡಿಸಿ, 5777 ಗ್ರಾಮ ಪಂಚಾಯತಿಗಳಿಗೆ ವೇತನಕ್ಕಾಗಿ ಮೂರನೇ ಕಂತಿನ (ಡಿಸೆಂಬರ್-2023 ರಿಂದ ಮಾರ್ಚ್ - 2024) ಅನುದಾನದ ಮೊತ್ತ ₹.2,70,12,86,666/- (ಎರಡು ನೂರ ಎಪ್ಪತ್ತು ಕೋಟಿ ಹನ್ನೆರಡು ಲಕ್ಷ ಎಂಭತ್ತಾರು ಸಾವಿರದ ಆರು ನೂರಾ ಅರವತ್ತಾರು ರೂಪಾಯಿಗಳು ಮಾತ್ರ)ಗಳನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ(5) ರಲ್ಲಿ 2023-24ನೇ ಸಾಲಿನ ಆಗಸ್ಟ್-2023 ರಿಂದ ಮಾರ್ಚ-2024 ರವರೆಗೆ ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನವನ್ನು ಗ್ರಾಮಪಂಚಾಯತಿಗಳಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ(2)ರ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ಖಜಾನೆ-2 ಮುಖಾಂತರ ಲೆಕ್ಕ ಶೀರ್ಷಿಕೆ: 2515-00-198-1-07-300ರ ಅಡಿಯಲ್ಲಿ ನೇರವಾಗಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳ ಬ್ಯಾಂಕ್ ಖಾತೆಗಳಿಗೆ ಬಿಡುಗಡೆ ಮಾಡಲು ನಿರ್ಧರಿಸಿದೆ.

ಮುಂದುವರೆದು, ರಾಜ್ಯದ 5951 ಗ್ರಾಮ ಪಂಚಾಯಿತಿಗಳಲ್ಲಿ 2021-22 ನೇ ಸಾಲಿನಲ್ಲಿ ಎಸ್ಕ್ರೋ ಖಾತೆಗಳನ್ನು ಮುಕ್ತಾಯಗೊಳಿಸಿರುವ 1(ಯಾದಗಿರಿ -1) ಗ್ರಾಮ ಪಂಚಾಯಿತಿಯನ್ನು ಹೊರತುಪಡಿಸಿ ಉಳಿದಂತೆ 5950 ಗ್ರಾಮ ಪಂಚಾಯಿತಿಗಳಿಗೆ ಮೂರನೇ ಕಂತಿನ ಶಾಸನ ಬದ್ಧ ಅನುದಾನ ₹.130,57,38,827/-(ಒಂದು ನೂರಾ ಮುವ್ವತ್ತು ಕೋಟಿ ಐವತ್ತೇಳು ಲಕ್ಷದ ಮುವ್ವತ್ತೆಂಟು ಸಾವಿರದ ಎಂಟು ನೂರಾ ಇಪ್ಪತ್ತೇಳು ರೂಪಾಯಿಗಳು ಮಾತ್ರ) ಗಳನ್ನು ವಿದ್ಯುತ್ ಬಿಲ್ ಪಾವತಿಗಾಗಿ ಗ್ರಾಮ ಪಂಚಾಯಿತಿಗಳ ಎಸ್ಕ್ರೋ ಖಾತೆಗೆ ಬಿಡುಗಡೆ ಮಾಡಲು ನಿರ್ಧರಿಸಿ ಈ ಕೆಳಕಂಡಂತೆ ಆದೇಶ.

## ಆದೇಶ ಸಂಖ್ಯೆ:ಕ.ಪಂ.ರಾ.ಆ/ಅಭಿವೃದ್ಧಿ/197/2023, ಬೆಂಗಳೂರು, ದಿನಾಂಕ:26.12.2023

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2023-24ನೇ ಸಾಲಿನ ಗ್ರಾಮ ಪಂಚಾಯಿತಿಗಳಿಗೆ ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನದ ಮೂರನೇ ಕಂತು (ಡಿಸೆಂಬರ್-2023 ರಿಂದ ಮಾರ್ಚ್- 2024) ಅನುದಾನ ಮೊತ್ತ ವೇತನ ಬಾಬ್ತು ₹.2,70,12,86,666/- (ಎರಡು ನೂರ ಎಪ್ಪತ್ತು ಕೋಟಿ ಹನ್ನೆರಡು ಲಕ್ಷ ಎಂಭತ್ತಾರು ಸಾವಿರದ ಆರು ನೂರಾ ಅರವತ್ತಾರು ರೂಪಾಯಿಗಳು ಮಾತ್ರ)ಗಳನ್ನು ಹಾಗೂ ವಿದ್ಯುತ್‌ಚ್ಛಕ್ತಿ ಎಸ್ಕ್ರೋ ಖಾತೆ ಬಿಲ್ಲಿನ ಬಾಬ್ತು ₹.130,57,38,827/- (ಒಂದು ನೂರಾ ಮುವ್ವತ್ತು ಕೋಟಿ ಐವತ್ತೇಳು ಲಕ್ಷದ ಮೂವ್ವತ್ತೆಂಟು ಸಾವಿರದ ಎಂಟು ನೂರಾ ಇಪ್ಪತ್ತೇಳು ರೂಪಾಯಿಗಳು ಮಾತ್ರ)ಗಳು ಸೇರಿದಂತೆ ಒಟ್ಟು ₹.400,70,25,493/-(ನಾಲ್ಕು ನೂರು ಕೋಟಿ ಎಪ್ಪತ್ತು ಲಕ್ಷದ ಇಪ್ಪತ್ತೈದು ಸಾವಿರದ ನಾಲ್ಕು ನೂರಾ ತೊಂಭತ್ತಮೂರು ರೂಪಾಯಿಗಳು ಮಾತ್ರ) ಗಳನ್ನು ಲೆಕ್ಕಶೀರ್ಷಿಕೆ:2515-00-198-1-07-300 ರಡಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಆದೇಶಿಸಿದೆ.

1. ಅನುಬಂಧ-1ರಲ್ಲಿ ಇರುವಂತೆ ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನ ಅನುದಾನವನ್ನು ಸಂಬಂಧಪಟ್ಟ 5951 ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವೇತನ ಅನುದಾನದ ಬ್ಯಾಂಕ್ ಖಾತೆಗಳಿಗೆ ಮತ್ತು ಅನುಬಂಧ-2 ರಲ್ಲಿ ಇರುವಂತೆ ಎಸ್ಕ್ರೋ ಅನುದಾನದ ಬ್ಯಾಂಕ್ ಖಾತೆಗಳಿಗೆ ಖಜಾನೆ-2ರ ಮುಖಾಂತರ ಲೆಕ್ಕ ಶೀರ್ಷಿಕೆ 2515-00-198-1-07-300 ರಿಂದ ನೇರವಾಗಿ ಬಿಡುಗಡೆ ಮಾಡುವುದು.
2. ಅನುಬಂಧ-3ರಲ್ಲಿನ 177 ಗ್ರಾಮ ಪಂಚಾಯತಿಗಳು ವರ್ಷಿಕವಾಗಿ ರೂ.50.00ಲಕ್ಷಕ್ಕೂ ಹೆಚ್ಚು ಆದಾಯ ಗಳಿಸುವ ಸ್ವಂತ ಸಂಪನ್ಮೂಲ ಹೊಂದಿರುವ ಹಿನ್ನೆಲೆಯಲ್ಲಿ ಸದರಿ ಗ್ರಾಮ ಪಂಚಾಯತಿಗಳು ತಮ್ಮಲ್ಲಿ ಲಭ್ಯವಿರುವ ಸ್ವಂತ ಸಂಪನ್ಮೂಲದಲ್ಲಿ ಸಿಬ್ಬಂದಿಗಳ ವೇತನವನ್ನು ಪಾವತಿಸುವುದು.

3. ಅನುಬಂಧ-1ರಲ್ಲಿ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವೇತನಕ್ಕಾಗಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಡಿಸೆಂಬರ್-2023 ರಿಂದ ಮಾರ್ಚ್-2024ರವರೆಗಿನ ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ಬಳಸತಕ್ಕದ್ದು ಹಾಗೂ ಈ ಹಿಂದಿನ ತಿಂಗಳುಗಳ ವೇತನವು ಪಾವತಿಸಲು ಬಾಕಿ ಇದ್ದಲ್ಲಿ ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಪಾವತಿಸತಕ್ಕದ್ದು.

4. ಈ ಆದೇಶದಲ್ಲಿ ಸೂಚಿಸಿರುವ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗಿಂತ ಹೆಚ್ಚುವರಿ ಸಿಬ್ಬಂದಿ ನೇಮಕಾತಿಯಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಹುದ್ದೆ ಅನುಮೋದನೆಗೊಂಡ ಪ್ರಕರಣಗಳಿದ್ದಲ್ಲಿ ಅವರುಗಳಿಗೆ ವೇತನವನ್ನು ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಕಡ್ಡಾಯವಾಗಿ ಪಾವತಿಸತಕ್ಕದ್ದು ಹಾಗೂ ಗ್ರಾಮ ಪಂಚಾಯತಿಗಳು ತಮ್ಮ ಸಿಬ್ಬಂದಿಗಳಿಗೆ ವೇತನ ಪಾವತಿಸುವುದು ಆದ್ಯ ಕರ್ತವ್ಯವೆಂದು ಪರಿಭಾವಿಸತಕ್ಕದ್ದು. ಈ ಸಂಬಂಧ ಲೋಪವೆಸಗಿದಲ್ಲಿ ಸಂಬಂಧಿಸಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.

5. ಸರ್ಕಾರದಿಂದ ಈಗಾಗಲೇ ರಾಜ್ಯದಲ್ಲಿನ ಗ್ರಾಮ ಪಂಚಾಯತಿ ಸಿಬ್ಬಂದಿಗಳ ವೇತನ ಪಾವತಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಸ್ವಚ್ಛತೆ ಸೇವೆ ಒದಗಿಸುವ ಸಿಬ್ಬಂದಿಗಳಿಗೆ ವೇತನ ಪಾವತಿಗೆ ಅವಕಾಶವಿರುತ್ತದೆ.

6. ಗ್ರಾಮ ಪಂಚಾಯತಿಗಳು ಅನುಬಂಧ-2ರಲ್ಲಿ ಬಿಡುಗಡೆಯಾಗುತ್ತಿರುವ ಅನುದಾನವನ್ನು ಕಡ್ಡಾಯವಾಗಿ ವಿದ್ಯುತ್ ಬಿಲ್ಲುಗಳ ಸಲುವಾಗಿ ಪಾವತಿಸತಕ್ಕದ್ದು ಹಾಗೂ ಉಳಿದ ಹಣವನ್ನು ಇತರೆ ಅಭಿವೃದ್ಧಿ ಕಾರ್ಯಗಳಿಗಾಗಿ ಬಳಸಿಕೊಳ್ಳುವುದು. ಗ್ರಾಮ ಪಂಚಾಯತಿಗಳಲ್ಲಿ ವಿದ್ಯುತ್ ಬಿಲ್ಲು ಪಾವತಿಸಲು ಬಾಕಿ ಇದ್ದಲ್ಲಿ, ಅಂತಹ ಗ್ರಾಮ ಪಂಚಾಯತಿಗಳು ತಮ್ಮ ಸ್ವಂತ ಸಂಪನ್ಮೂಲದಿಂದ ವಿದ್ಯುತ್ ಬಿಲ್ಲುಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.

ಮೇಲ್ಕಂಡ ಉದ್ದೇಶಗಳಿಗಲ್ಲದೇ ಈ ಅನುದಾನವನ್ನು ಗ್ರಾಮ ಪಂಚಾಯಿತಿಗಳು ಬೇರೆ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/615/ವೆಚ್ಚ-6/2023, ದಿನಾಂಕ:12.12.2023 ಮತ್ತು ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 07 ಟಿಎಫ್‌ಪಿ 2023, ದಿನಾಂಕ31.07.2023 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

**(ಮಾನ್ಯ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್),**
**ಗ್ರಾ.ಅ.& ಪಂ.ರಾಜ್ ಇಲಾಖೆ, ರವರಿಂದ ಅನುಮೋದಿಸಲ್ಪಟ್ಟಿದೆ).**

ನಿರ್ದೇಶಕರು (ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಬೆಂಗಳೂರು.

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
3. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ನಿರ್ದೇಶಕರು, ಎನ್.ಎಂ.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-01
6. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕೆ.ಆರ್.ವೃತ್ತ, ಬೆಂಗಳೂರು
7. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಪಿ.ಬಿ.ರಸ್ತೆ, ನವನಗರ, ಹುಬ್ಬಳ್ಳಿ-580029.

8. ವ್ಯವಸ್ಥಾಪಕ ನಿರ್ದೇಶಕರು, ಕಲಬುರಗಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಸ್ಟೇಷನ್ ರಸ್ತೆ, ಕಲಬುರಗಿ-585101.
9. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಎ.ಬಿ.ಶೆಟ್ಟಿ ವೃತ್ತ, ಮಂಗಳೂರು-575001.
10. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ನಂ.29, ವಿಜಯನಗರ 2ನೇ ಹಂತ, ಹಿನ್ಕಲ್, ಮೈಸೂರು- 570017.
11. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ನಿರ್ವಾಹಕ ಅಧಿಕಾರಿಗಳು
12. ಆರ್ಥಿಕ ಅಧಿಕಾರಿ, ಲೆಕ್ಕ ಪತ್ರ ಶಾಖೆ, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
13. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು (ಆಯಾ ತಾಲ್ಲೂಕು ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಈ ಆದೇಶದ ಪ್ರತಿಯನ್ನು ತಲುಪಿಸುವುದು)
14. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು
15. ಉಪ ನಿರ್ದೇಶಕರು, ಎನ್.ಎಂ.ಸಿ., ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
16. ವ್ಯವಸ್ಥಾಪಕರು, ಭಾರತೀಯ ಸ್ಟೇಟ್‌ಬ್ಯಾಂಕ್, ವಿಧಾನಸೌಧ ಶಾಖೆ, ಬೆಂಗಳೂರು-01-ಇವರಿಗೆ ಅಗತ್ಯಕ್ರಮಕ್ಕಾಗಿ.
17. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
18. ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ- ಇಲಾಖಾ ವೆಬ್‌ಸೈಟ್‌ನಲ್ಲಿ
19. ಮಾಹಿತಿ ಕೇಂದ್ರ / ವೆಬ್‌ಸೈಟ್, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.

**<u>ಪ್ರತಿ ಮಾಹಿತಿಗಾಗಿ:</u>**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಆರ್ಥಿಕ ಇಲಾಖೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರ ಆಪ್ತ ಸಹಾಯಕರು ಬೆಂಗಳೂರು.
5. ನಿರ್ದೇಶಕರು(ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
6. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ-6, ಆರ್ಥಿಕ ಇಲಾಖೆ, ವಿಧಾನಸೌಧ.
   ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
7. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
8. ಶಾಖಾ ರಕ್ಷಾ ಕಡತಕ್ಕೆ.